ಇಂಥಾ ವರ್ತಮಾನ ಕೊಡುವಂಥಾವರು ಯಾವ ಕಾಲದಲ್ಲೇ ಆಗಲಿ ಈ ಕೆಳಗೆ ಸ್ಯೆ ಮಾಡಿರುವಂಥಾ ಸಾಹೇಬರನ್ನ ಅವರ ಮನೆಯಲ್ಲೇ ಆಗಲಿಅಥವಾ ಕಛೇರಿಯಲ್ಲೇ ಆಗಲಿ ನೋಡಬಹುದು.

ಈ. ಹ್ಯೂಟ್‌ಸ್ಯ,
ಪೋಲೀಸ್ ಡಿ॥ ಸೂಪರ್‌ಟೆಂಡೆಂಟ್.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 14ನೇ ಜನವರೀ 1884.

ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 23ನೇ ಸೆಕ್ಷನಿಗನುಗುಣವಾಗಿ ತುಮಕೂರು ತಾಲ್ಲೂಕು ಆಕ್ಟಿಂಗ್ ಅಮೆಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾದ ನಾಗೇಶ್ವರಯ್ಯನವರಿಗೆ, 1872ನೇ ಇಸವಿ Xನೇ ಆಕ್ಟ್‌ಎಂಬ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 23ನೇ ಸೆಕ್ಷ್ಯ (ಬಿ) ಕ್ಲಾಜ್‌ನಲ್ಲಿ ವಿವರಿಸಲ್ಪಟ್ಟಿರುವ ಮೇರಿಗೆ ಅವರು ತಾಲ್ಲೂಕು ಚಾರ್ಜಿನಲ್ಲಿ ಯಿರುವ ಕಾಲದಲ್ಲಿ ಚಲಾಯಿಸಲ್ಪಡತಕ್ಕ ಬಗ್ಯೆ ಇದರಡೀ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

1. ಲಾಷ್ ವಿಚಾರಣೆ ಬಗ್ಯೆ ಅಧಿಕಾರ (ಸೆಕ್ಷ್ಯ 135.)
2. ವಿಚಾರಣೆ ಬಗ್ಯೆ ತಮಿಗೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ತಕ್ಷೀರುಗಳ ಬಾಬತು ಫಿರಿಯಾದಿಗಳನ್ನು ದಾಖಲ್ಮಾಡಿ ಕೊಳ್ಳುವದಕ್ಕೆ ಅಧಿಕಾರ (ಸೆಕ್ಷ್ಯ 141.)
3. ನಿರೋಧ ವಗೈರೇಗಳನ್ನ ಅಡ್ಡೀ ಮಾಡುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ (ಸೆಕ್ಷ್ಯ 518.)
4. ಬಾರ್ ಬಾರ್ ಹೇಸಿಗೆ ಮಾಡುವದನ್ನ ನಿಷೇಧಿಸಿ ಹುಕ್ಕುಂ ಕೊಡುವ ಬಗ್ಯೆ ಅಧಿಕಾರ (ಸೆಕ್ಷ್ಯ 517.)

ಮಹಮ್ಮದ್‌ಅಲ್ಲಿ, ಕೆ. ಬಿ.
ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಸಬಾರ್ಡಿನೆಟ್ ಜಡ್ಜ್‌ರಯವರ ಕೋರ್ಟಿನಲ್ಲಿ.

1883ನೇ ಇಸವಿ ಆರ್ಜೀ ನಂಬರ್ 553.

ಮೃತಪಟ್ಟ ಶೇತಾರಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಂಜಯ್ಯ, ಮೈನರ್ ಗಾರ್ಡಿಯ್ಯ ಮತ್ತು ತಾಯಿ ನರಸಮ್ಮ, ಮೃತಪಟ್ಟ ಸದರೀ ಶೇತಾರಾಮಯ್ಯನಿಗೆ ಮಗ ಆಗ ಬೇಕೆಂಬ ಹಕ್ಕುದಾರಿ ಮೇಲೆ ಹೊಳೇನರಸಿಪುರ ಕಸಬಾ ಸ್ಥಳದ ಸದರೀ ಮಂಜಯ್ಯ ಮೈನರ್ ಗಾರ್ಡಿಯ್ಯ ಮತ್ತು ತಾಯಿ ನರಸಮ್ಮ, ಸದರೀ ವಾಸಸ್ಥನಾಗಿ ಮೃತಪಟ್ಟ ಶೇತಾರಾಮಯ್ಯನ ಜಿಂದಗಿ ಬಗ್ಯೆಗೆ ಬರತಕ್ಕ 600 ರೂಪಾಯಿಗಳ ಸಾಲವನ್ನು ವಸೂಲ್ಮಾಡುವಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಂಜಯ್ಯ ಮೈನರ್ ಗಾರ್ಡಿಯ್ಯ ಮತ್ತು ತಾಯಿ ನರಸಮ್ಮನ ಅರ್ಜೀಯನ್ನು 1884ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 19ರಲ್ಲು ಮೈಸೂರು ಮೊಕ್ಕಾಂನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೇತಾರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಆರ್ಜೀ ನಂಬರ್ 2.

ಮೃತಪಟ್ಟ ತಮ್ಮಯ್ಯ ಜೋಯಿಸನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗೋಪಾಲಕೃಷ್ಣಸ್ವಾಮಿ ಮೈನರ್ ಗಾರ್ಡಿಯ್ಯ ಮತ್ತು ತಾಯಿ ಗೌರಮ್ಮ, ಮೃತಪಟ್ಟ ಸದರೀ ತಮ್ಮಯ್ಯ ಜೋಯಿಸಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಅತ್ತಿಕುಪ್ಪೆ ತಾಲ್ಲೂಕು ಕನ್ನಂಬಾಡಿ ಸ್ಥಳದ ಸದರೀ ಗೋಪಾಲ ಕೃಷ್ಣಸ್ವಾಮಿ ಮೈನರ್ ಗಾರ್ಡಿಯ್ಯ ಮತ್ತು ತಾಯಿ ಗೌರಮ್ಮ, ಡಿಟೋ ವಾಸಸ್ಥನಾಗಿ ಮೃತಪಟ್ಟ ತಮ್ಮಯ್ಯ ಜೋಯಿಸನ ಜಿಂದಗೀ ಬಗ್ಯೆಗೆ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.